## ‘ಆಶೀರ್ವಾದ’ದ ಹಂಬಲದಲ್ಲಿ ದಿಶಾ

‘ಆಶೀರ್ವಾದ’ ಚಿತ್ರದ ಸುದ್ದಿಗೋಷ್ಠಿಯಲ್ಲಿ ಚಿನಕುರಳಿಯಂತೆ ಸುಳಿದಾಡುತ್ತಿದ್ದ ಚೆಲುವೆಯ ಹೆಸರು ದಿಶಾ ಪೂವಯ್ಯ. ಕನ್ನಡದ ಪ್ರೇಕ್ಷಕರಿಗೆ ದಿಶಾ ಹೊಸ ಮುಖವೇನಲ್ಲ. ‘ಅಗಮ್ಯ’, ‘ಸ್ಲಂ’, ‘ಪೊಲೀಸ್ ಸ್ಟೋರಿ–3’ ಚಿತ್ರಗಳಲ್ಲಿ ಅಭಿನಯಿಸಿರುವ ದಿಶಾ, ಕನ್ನಡ ಸಹೃದಯರ ಮನಸ್ಸಿನಲ್ಲಿ ನೆಲೆ ನಿಲ್ಲಲು ಪ್ರಯತ್ನಿಸುತ್ತಿರುವ ಚೆಲುವೆ.

ದಿಶಾಗೆ ‘ಆಶೀರ್ವಾದ’ ಚಿತ್ರದ ಪಾತ್ರ ಇಷ್ಟವಾಗಿದೆ. ಚಿತ್ರದಲ್ಲಿ ಆಕೆಯದು ಕಾಲೇಜು ಹುಡುಗಿಯ ಪಾತ್ರ. ಪ್ರೀತಿ ಪ್ರೇಮ ಪ್ರಣಯದ ವಿವಿಧ ಮುಖಗಳನ್ನು ಅವರ ಪಾತ್ರ ಪ್ರತಿನಿಧಿಸುತ್ತದಂತೆ. ಈ ಪಾತ್ರದಲ್ಲಿ ಗ್ಲಾಮರ್‌ಗೂ ಸಾಕಷ್ಟು ಅವಕಾಶ ಇದೆ ಎನ್ನುವ ಅವರು, ತಮ್ಮ ಹೊಸ ಪ್ರಯತ್ನಕ್ಕೆ ಸಹೃದಯರ ಆಶೀರ್ವಾದ ಸಿಗುವ ನಿರೀಕ್ಷೆ ಹೊಂದಿದ್ದಾರೆ.

ಮೂಲತಃ ಕೊಡಗಿನವರಾದ ದಿಶಾ ನಟಿಯಾಗಬೇಕು ಎನ್ನುವ ಆಸೆಯಿಂದಲೇ ಕಾಫಿ ಎಸ್ಟೇಟ್ ಅಂಗಳದಿಂದ ಗಾಂಧಿನಗರಕ್ಕೆ ಬಂದವರು. ಒಂದೆಡೆ ವಿದ್ಯಾಭ್ಯಾಸ, ಇನ್ನೊಂದೆಡೆ ಸಿನಿಮಾ– ಎರಡನ್ನೂ ಸಂಭಾಳಿಸುವ ಆತ್ಮವಿಶ್ವಾಸ ಅವರದು. ಚೆಲುವಿನ ಜೊತೆಗೆ ಗಟ್ಟಿ ಪಾತ್ರಗಳ ಮೂಲಕ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳುವ ಹಂಬಲ ಅವರದು.

ಸೂರ್ಯಮೋಹನ್ ‘ಆಶೀರ್ವಾದ’ ಚಿತ್ರದ ನಿರ್ಮಾಪಕರು. ನಾಯಕ ಕೂಡ ಅವರೇ. ಉದ್ಯಮಿಯಾಗಿ ಗುರ್ತಿಸಿಕೊಂಡಿರುವ ಅವರಿಗೆ ಕಲಾವಿದನಾಗಿಯೂ ಹೆಸರು ಮಾಡುವ ಆಸೆ. ವಿಷ್ಣುಪ್ರಿಯನ್ ಈ ಚಿತ್ರದ ನಿರ್ದೇಶಕರು. ಈಗಾಗಲೇ ನೂರು ದಿನಗಳ ಶೂಟಿಂಗ್ ನಡೆಸಿರುವ ಅವರು, ಇನ್ನೊಂದು ಶೆಡ್ಯೂಲ್‌ನಲ್ಲಿ ಚಿತ್ರೀಕರಣ ಮುಗಿಸಲಿದ್ದಾರಂತೆ.






ಪ್ರಸಿದ್ಧಿ ಮತ್ತು ಯುಗಾದಿ

ಈ ಯುಗಾದಿ ಹಬ್ಬವನ್ನು ನೈಜ ರೇಷ್ಮೆಯನ್ನು ಧರಿಸಿ.

ಸಾಂಪ್ರದಾಯ ಹಾಗೂ ಸಮಕಾಲೀನ ವಿವಿಧ ನಮೂನೆಯ ಸೀರೆಗಳು ಮತ್ತು ಸಲ್ವಾರ್ ಸೂಟ್ ಗಳಿಗೆ ಇಂದೇ ಭೇಟಿ ನೀಡಿ.

ಹಿರಿಯ ನಾಗರಿಕರಿಗೆ ಶೇಖಡ 5% ರಿಯಾಯಿತಿ ಲಭ್ಯವಿರುತ್ತದೆ (ಈ ಹಬ್ಬದವರೆಗೆ ಮಾತ್ರ)

Silks, Cottons & Salwars
Prasiddhi SILKS
A renowned name for well known saris

23/2, K.H. Road
Double Road
Ph: 22236613

Bannerghatta Road
Near Shopper's Stop
Ph: 26689345

M.G. Road
Beside Cauvery Handicrafts
Ph: 25594586

Commercial Street
Next to Woodys
Ph: 25321545

OPEN ON SUNDAYS ALSO